# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 314 | Pages. 2 | Date: 09-11-2025, SUNDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 314 – ಪುಟಗಳು : 2 09-11-2025 ಭಾನುವಾರ | Ph: 8762954248 | ದರ : ₹1


# ಕನಕದಾಸರು ಒಂದು ಸಮುದಾಯಕ್ಕೆ ಸೀಮಿತ ವ್ಯಕ್ತಿಯಲ್ಲ

## ಇಡೀ ಮಾನವಕೋಟಿಗೆ ಮಾದರಿಯಾದ ಚಿಂತಕ : ಸಂಸದ ಶ್ರೇಯಸ್ ಪಟೇಲ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬಡವ-ಶ್ರೀಮಂತರ ನಡುವಿನ ಭೇದವನ್ನು ನೀಗಿಸಿ ಸಮಾನತೆಯ ಸಂದೇಶ ಸಾರಿರುವ ಕನಕದಾಸರು ಒಂದು ಸಮುದಾಯದವರಲ್ಲ, ಅವರು ಇಡೀ ಮಾನವಕೋಟಿಗೆ ಮಾದರಿಯಾದ ಶ್ರೇಷ್ಠ ಚಿಂತಕ ಎಂದು ಸಂಸದ ಶ್ರೇಯಸ್ ಎಂ. ಪಟೇಲ್ ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶನಿವಾರ ನಡೆದ ದಾಸಶ್ರೇಷ್ಠ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು, ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದಲ್ಲಿ ಜಾತಿ-ಜಾತಿಗಳ ನಡುವಿನ ಅಡೆತಡೆಗಳನ್ನು ಕರಗಿಸಿದರು. ಅವರ ರಾಮಧ್ಯಾನ ಚರಿತೆ ಯಂತಹ ಕೃತಿಗಳು ಬಡವ-ಶ್ರೀಮಂತರ ಮಧ್ಯದ ಭೇದವನ್ನು ನೀಗಿಸಿ ಸಮಾನತೆಯ ಸಂದೇಶ ನೀಡಿವೆ. ಕನಕದಾಸರು ಒಂದು ಸಮುದಾಯದವರಲ್ಲ, ಅವರು ಇಡೀ ಮಾನವ ಕುಲಕ್ಕೆ ಮಾದರಿಯಾದ ಚಿಂತಕ ಎಂದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಮಾತನಾಡಿ, ದಾಸಶ್ರೇಷ್ಠ ಶ್ರೀ ಕನಕದಾಸರ ಬರಹಗಳು ಕನ್ನಡ ಸಾಹಿತ್ಯದ ಆಭರಣವಾಗಿದ್ದು, ಅವರ ಮಾನವತಾವಾದಿ ಚಿಂತನೆಗಳು ಇಂದಿಗೂ ಸಮಾಜಕ್ಕೆ ಪ್ರೇರಣೆ ನೀಡುತ್ತಿವೆ. ಇಂತಹ ಮಹಾನ್ ಭಾವಕವಿ ನಮ್ಮ ರಾಜ್ಯದಲ್ಲಿ ಜನಿಸಿದುದು ನಮ್ಮೆಲ್ಲರ ಹೆಮ್ಮೆ. ಕನಕದಾಸರು ತಮ್ಮ ಇಡೀ ಜೀವನವನ್ನು ಸಮಾಜದ ಸೇವೆಗೆ ಅರ್ಪಿಸಿದರು. ಅವರ ಕೀರ್ತನೆಗಳು ಕೇವಲ



ಭಕ್ತಿಗೀತೆಗಳಲ್ಲ, ಮನುಷ್ಯನ ಬದುಕಿಗೆ ಬೆಳಕು ತೋರಿಸುವ ತತ್ತ್ವೋಪದೇಶಗಳಾಗಿವೆ. ಅವರ ಜೀವನಮೌಲ್ಯಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಿಜವಾದ ಗೌರವ, ಎಂದು ಅವರು ಹೇಳಿದರು. ಕಾಗಿನೆಲೆಯ ಆದಿಕೇಶವನ ದೇವಾಲಯದಲ್ಲಿ ಇಂದಿಗೂ ಕನಕದಾಸರು ಉಪಯೋಗಿಸಿದ ವಸ್ತುಗಳು ಸಂಗ್ರಹವಾಗಿದ್ದು, ಅವರ ಅಜರಾಮರ ಸ್ಮರಣೆಯನ್ನು ಜೀವಂತವಾಗಿಟ್ಟಿವೆ. 16ನೇ ಶತಮಾನದಲ್ಲೇ ತಮ್ಮ ಲೌಕಿಕ ಜೀವನವನ್ನು ಬದಿಗಿಟ್ಟು ಕೀರ್ತನೆಗಳ ಮೂಲಕ ಸಮಾಜದ ಏಳಿಗೆಗೆ ಶ್ರಮಿಸಿದ ಅವರ ಜೀವನ ಶೈಲಿ ಎಲ್ಲರಿಗೂ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಕಾರ್ಯಕ್ರಮದ ಕೊನೆಯಲ್ಲಿ ಕನಕದಾಸರ ಭಕ್ತಿ ಗೀತೆಗಳು ಗಾಯನ ತಂಡದಿಂದ ನಾದಿಸಲ್ಪಟ್ಟವು. ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

## ಆಕರ್ಷಕ ಮೆರವಣಿಗೆಗೆ ಚಾಲನೆ



ಹಾಸನ: ನಗರದ ಜಿಲ್ಲಾಧಿಕಾರಿ ಕಛೇರಿ ಆವರಣದಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಶನಿವಾರದಂದು ಬೆಳಿಗ್ಗೆ ಹಮ್ಮಿಕೊಳ್ಳಲಾಗಿದ್ದ ಕನಕದಾಸರ ಜಯಂತಿ ಅಂಗವಾಗಿ ಬೆಳ್ಳಿ ರಥದಲ್ಲಿ ಇಡಲಾಗಿದ್ದ ಕನಕದಾಸರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿ ಚಾಲನೆ ನೀಡಿದರು.

ಕ್ಷೇತ್ರದ ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ವಿಶ್ವಮಾನವ ಪರಿಕಲ್ಪನೆಯ ಸಂದೇಶವನ್ನು ಹಾಗೂ ಎಲ್ಲಾ ಧರ್ಮವನ್ನು ಒಂದೆ ಧರ್ಮವೆಂದು ಸಾರಿದವರು ಕನಕ ದಾಸರು. ನನಗೆ ಯಾವ ಕೀಳರಿಮೆ ಇಲ್ಲ ಎಂದು ಹೇಳಿದವರಲ್ಲಿ ಕನಕದಾಸರೇ ನಮಗೆ ನಿದರ್ಶನ ಎಂದು ನೀವು ಮಾಡುವ ಪ್ರತಿ ಸಣ್ಣ ಸಣ್ಣ ಕೆಲಸವೇ ದೇವರು ಎಂದು ತಿಳಿಸಿಕೊಟ್ಟವರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ದಾಸ ಶ್ರೇಷ್ಠರು, ಸಾಮಾಜಿಕ ಪರಿವರ್ತಕರು ಸಾಹಿತಿಗಳು, ಕವಿಗಳು, ಚಿಂತನಗಾರರು, ದಾರ್ಶನಿಕರುಗಳಾದ ಕನಕ ದಾಸರ ಜಯಂತಿ ಆಚರಿಸಲಾಗುತ್ತಿದೆ. ಅವರ ಸಾಧನೆ, ಕೊಡುಗೆಗಳು ಮಾನವ ಜನಾಂಗಕ್ಕೆ ಶಾಶ್ವತವಾಗಿ ಉಳಿದಿದೆ ಎಂದರು.

# ಇಂದು ಶಾಂತಿಸಾಗರ ಮಹಾರಾಜರ ಪ್ರತಿಮೆ-4ನೇ ಬೆಟ್ಟದ ಪದನಾಮ ಅನಾವರಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಆಚಾರ್ಯ ಶ್ರೀ 108ನೇ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನಾ ಮಹೋತ್ಸವ ಮತ್ತು ಶ್ರವಣಬೆಳಗೊಳ ಕ್ಷೇತ್ರದಲ್ಲಿ ನಾಲ್ಕನೇ ಬೆಟ್ಟದ ಪದನಾಮ ಅನಾವರಣ ನ. 9ರ ಭಾನುವಾರ ನೆರವೇರಲಿದೆ.

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಕೇಂದ್ರ ಸಚಿವ ಹೆಚ್ .ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಸೇರಿ ಇತರರು ಉಪಸ್ಥಿತಿ ವಹಿಸುವರು.

ಬೆಳಿಗ್ಗೆ 8.45ಕ್ಕೆ ಶ್ರವಣಬೆಳಗೊಳಕ್ಕೆ ಆಗಮಿಸುವ ಉಪ ರಾಷ್ಟ್ರಪತಿ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸ್ವಾಗತಿಸಲಿದ್ದು, 10.15ಕ್ಕೆ ನಿರ್ಗಮಿಸಲಿದ್ದಾರೆ. ಸಚಿವ ಡಿ.ಸುಧಾಕರ್, ಸಂಸದ ಶ್ರೇಯಸ್ ಪಟೇಲ್ ಭಾಗಿಯಾಗುವರು. ಶಾಸಕ ಸಿ.ಎನ್.ಬಾಲಕೃಷ್ಣ ಅಧ್ಯಕ್ಷತೆ ವಹಿಸುವರು. ಶಾಸಕರಾದ ಅಭಯ್ ಪಾಟೀಲ, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ರಾಜ್ಯಸಭೆ ಸದಸ್ಯ ನವೀನ್ ಜೈನ್ ಹಾಗೂ ಮಹರಾಷ್ಟ್ರದ ಶಾಸಕರೂ ಭಾಗಿಯಾಗಲಿದ್ದಾರೆ.

ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾ ಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಬೆಳಿಗ್ಗೆ 10.30 ಗಂಟೆಗೆ ಶ್ರೀಕ್ಷೇತ್ರದ ಗೊಮ್ಮಟನಗರದ ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಕಾರ್ಯಕ್ರಮ ಆರಂಭವಾಗಲಿದೆ. ಮಧ್ಯಾಹ್ನ 1



ಗಂಟೆಗೆ 4ನೇ ಬೆಟ್ಟದ ಮೇಲೆ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನಾ ಚರಣ ಪಾದುಕೆ ಸ್ಥಾಪನೆ ಹಾಗೂ ಬೆಟ್ಟಕ್ಕೆ ಪದನಾಮ ಅನಾವರಣ ಮತ್ತು ಶಾಂತಿಸಾಗರ ಮಹಾರಾಜರ ಜೀವನ ಚರಿತ್ರೆಯ ಬೃಹತ್ ಶಿಲಾಶಾಸನ ಲೋಕಾರ್ಪಣೆ ಆಗಲಿದೆ.

ಮಧ್ಯಾಹ್ನ 3.30 ಗಂಟೆಗೆ ಶ್ರೀಮಠದ ಮುಂಭಾಗದಿಂದ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಪ್ರತಿಮೆಯೊಂದಿಗೆ ವಿವಿಧ ಮಂಗಳವಾದ್ಯ, ಧರ್ಮ ಧ್ವಜ, ಮಂಗಳ ಕಳಶಗಳೊಂದಿಗೆ ಬೃಹತ್ ಮೆರವಣಿಗೆ ಹಾಗೂ ಸಂಜೆ 6 ಗಂಟೆಗೆ ಮೆರವಣಿಗೆಯಲ್ಲಿ ಸಾಗಿ ನೂತನವಾಗಿ ಸ್ಥಾಪಿತಗೊಂಡಿರುವ ಪ್ರತಿಮೆ ಪ್ರತಿಷ್ಠಾಪನೆ ಕಾರ್ಯಕ್ರಮ ಜರುಗಲಿದೆ.


## ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ (ರಿ)




# ಆಡಳಿತ ಮಂಡಳಿ ಚುನಾವಣೆ 2025




ನಮ್ಮೆಲ್ಲ ಪ್ರೀತಿಯ ಹಿರಿಯ ಹಾಗೂ ಕಿರಿಯ ಪತ್ರಕರ್ತ ಬಾಂಧವರೇ, ಇದೇ ನವೆಂಬರ್ 09 ರಂದು (09-11-2025 ಭಾನುವಾರ) ಹಾಸನ ಜಿಲ್ಲಾ ಪತ್ರಕರ್ತರ ಸಂಘದ ನೂತನ ಆಡಳಿತ ಮಂಡಳಿಗೆ ಚುನಾವಣೆ ನಿಗದಿಯಾಗಿದೆ. ಕೆ.ಯು.ಡಬ್ಲ್ಯೂ.ಜೆ. ರಾಜ್ಯಾಧ್ಯಕ್ಷರಾದ ಶ್ರೀ ಶಿವಾನಂದ ತಗಡೂರು, ಉಪಾಧ್ಯಕ್ಷರಾದ ಶ್ರೀ ಹೆಚ್.ಬಿ.ಮದನಗೌಡರು, ಹಾಸನ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಬಾಳ್ಳುಗೋಪಾಲ್, ಶ್ರೀ ರವಿನಾಕಲಗೂಡು, ಶ್ರೀ ಬಿ. ಆರ್. ಉದಯ್ ಕುಮಾರ್ ಹಾಗೂ ಹಿರಿಯ ಪತ್ರಕರ್ತ ಚೌಡಳ್ಳಿ ಜಗದೀಶ್ ಅವರ ಮಾರ್ಗದರ್ಶನದಲ್ಲಿ ಶ್ರೀ ಜೆ.ಆರ್.ಕೆಂಚೇಗೌಡರು, ಶ್ರೀ ನಂಜುಂಡೇಗೌಡರ ನೇತೃತ್ವದಲ್ಲಿ ಒಂದು ತಂಡವಾಗಿ ಚುನಾವಣೆಗೆ ಸ್ಪರ್ಧೆ ಮಾಡಿದ್ದೇವೆ.

ಮತದಾನದ ಸಮಯ : ಬೆಳಗ್ಗೆ 8-00 ರಿಂದ 2-00ಗಂಟೆವರೆಗೆ
ಸ್ಥಳ : ಪತ್ರಕರ್ತರ ಭವನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಹಾಸನ

## -: ಅಭ್ಯರ್ಥಿಗಳ ಪಟ್ಟಿ :-

| ಕ್ರಮ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಅಭ್ಯರ್ಥಿಗಳ ಭಾವಚಿತ್ರ | ಮತ |
|---|---|---|---|
| 01 | ಜೆ.ಆರ್.ಕೆಂಚೇಗೌಡ (ಅಧ್ಯಕ್ಷರು) |  | |
| 01 | ನಂಜುಂಡೇಗೌಡ (ಉಪಾಧ್ಯಕ್ಷರು) |  | |
| 02 | ನಾಗರಾಜ್ ಹೆತ್ತೂರು (ಉಪಾಧ್ಯಕ್ಷರು) |  | |
| 03 | ಜಿ.ಪ್ರಕಾಶ್ (ಉಪಾಧ್ಯಕ್ಷರು) |  | |
| 03 | ಕೆ.ಜಿ.ಸುರೇಶ್ (ಪ್ರಧಾನ ಕಾರ್ಯದರ್ಶಿ) |  | |
| 01 | ಖುಶ್ವಂತ್ (R ಕನ್ನಡ) (ಕಾರ್ಯದರ್ಶಿ) |  | |
| 03 | ಬಿ.ಆರ್.ಬೊಮ್ಮೇಗೌಡ (ಕಾರ್ಯದರ್ಶಿ) |  | |
| 06 | ಸುವರ್ಣ ಹರೀಶ್ (ಕಾರ್ಯದರ್ಶಿ) |  | |
| 01 | ತ್ಯಾಗರಾಜ (TV5 ಪ್ರಕಾಶ್) (ಖಜಾಂಚಿ) |  | |
| 01 | ಕೆ.ಪಿ.ಎಸ್.ಪ್ರಮೋದ್ (ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ) |  | |

## -: ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಅಭ್ಯರ್ಥಿಗಳು

| ಕ್ರಮ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಅಭ್ಯರ್ಥಿಗಳ ಭಾವಚಿತ್ರ | ಮತ |
|---|---|---|---|
| 03 | ಕೃಷ್ಣ ಇಬ್ಬೀಡು (ನ್ಯೂಸ್ 18) |  | |
| 05 | ಜಗದೀಶ್ ಸಿ.ಆರ್ (ಚೌಡಳ್ಳಿ) |  | |
| 09 | ನವೀನ್ ಸಿ.ಆರ್ (ಜನಮಿತ್ರ) |  | |
| 10 | ನಾಗರಾಜ್ ಹೆಚ್.ಎ (ದಿಗ್ವಿಜಯ) |  | |
| 11 | ಪ್ರತಾಪ್ ಹೆಚ್.ಜಿ (ಹಿರೀಸಾವೆ) |  | |
| 12 | ಪ್ರಸನ್ನಕುಮಾರ್ (ಚಲಂ) |  | |
| 14 | ಮಲ್ಲೇಶ್ ಬೇಲೂರು |  | |
| 15 | ರಾಘವೇಂದ್ರ ಹೆಚ್.ವಿ (ರಾಘು ಆಲೂರು) |  | |
| 16 | ವಿರೂಪಾಕ್ಷ ಪಿ.ಬಿ (ಅರಕಲಗೂಡು) |  | |
| 17 | ವಿಶ್ವನಾಥ್ ಎನ್.ಆರ್. (ಸುಂದರ ನಾಕಲಗೂಡು) |  | |
| 18 | ಶರಣ್ ಜಿ (ನಾಡಸಹ್ಯಾದ್ರಿ) |  | |
| 19 | ಶರತ್ ಹೆಚ್.ಆರ್ (ಸುವರ್ಣ) |  | |
| 20 | ಸುರೇಶ್‌ಕುಮಾರ್ ಹೆಚ್.ವಿ (ಹೊಳೆನರಸೀಪುರ) |  | |
| 22 | ಸ್ವರೂಪ್ ಎಂ.ಜಿ (ಮಳಲಿ) |  | |

# ಜೈನಕಾಶಿ ಶ್ರವಣಬೆಳಗೊಳದಲ್ಲಿ ಬೆಳಕಿನ ಹೊನಲು

## ಶಾಂತಿ ಸಾಗರ ಮಹಾರಾಜರ ಸಾಧನೆ ಅಪಾರ | ಪ್ರವಾಸಿ ತಾಣವಾಗಿ ಬೆಳಗೊಳಕ್ಕೆ ಮತ್ತಷ್ಟು ಗರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಜೈನಕಾಶಿ ಶ್ರವಣಬೆಳಗೊಳವು ಚಂದ್ರಗಿರಿ ಹಾಗೂ ಇಂದ್ರಗಿರಿ ಬೆಟ್ಟ ಸೇರಿ ಏಕಶಿಲಾ ಶ್ರೀ ಬಾಹುಬಲಿ ಮೂರ್ತಿಯೊಂದಿಗೆ ತನ್ನದೇಯಾದ ಮಹತ್ವ ಹೊಂದಿದ್ದು ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ.

ಚಾರುಗಿರಿ ಮತ್ತು ಶಾಂತಿಗಿರಿ ಬೆಟ್ಟಗಳು ಸೇರ್ಪಡೆಯಾಗುವ ಮೂಲಕ ಮತ್ತಷ್ಟು ಹಿರಿಮೆ ಹೆಚ್ಚಿಸಿದೆ. ಶ್ರೀಕ್ಷೇತ್ರದ ನೂತನ ಪೀಠಾಧ್ಯಕ್ಷ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ವಿನೂತನ ದೃಷ್ಟಿಕೋನದಿಂದ ಕ್ಷೇತ್ರದ ಬೆಳಕನ್ನು ಎಲ್ಲೆಡೆ ಹರಡುವಲ್ಲಿ ಕಾರ್ಯ ನಿರತರಾಗಿದ್ದಾರೆ.

ತಮ್ಮ ದೀಕ್ಷಾ ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ನಿಷಿಧಿ ಮಂಟಪ ನಿರ್ಮಿಸುವ ಮೂಲಕ ಆ ಪ್ರದೇಶವನ್ನು ಚಾರುಗಿರಿಯನ್ನಾಗಿ ಮಾಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ 20ನೇ ಶತಮಾನದ ಪ್ರಥಮಚಾರ್ಯ ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ 108 ಶಾಂತಿಸಾಗರ ಮಹಾರಾಜ ಅವರ ಹತ್ತು ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ದೊಡ್ಡ ಬೆಟ್ಟಕ್ಕೆ ಹೊಂದಿಕೊಂಡಿರುವ ಮತ್ತೊಂದು ಚಿಕ್ಕ ಬೆಟ್ಟದಲ್ಲಿ ಪ್ರತಿಷ್ಠಾಪಿಸುವ ಮೂಲಕ ಶಾಂತಿಗಿರಿ ಅನಾವರಣಕ್ಕೆ ಮುಂದಾಗಿದ್ದಾರೆ.

ಅಲ್ಲದೆ ಬೆಂಗಳೂರು ರಸ್ತೆಯಲ್ಲಿರುವ ಚಿಕ್ಕ ಬೆಟ್ಟಕ್ಕೆ ಹೊಂದಿಕೊಂಡಂತಿರುವ



ಮತ್ತೊಂದು ಪ್ರದೇಶದ 5ನೇ ಬೆಟ್ಟವನ್ನು ಇತಿಹಾಸದ ಪುಟಗಳಲ್ಲಿ ಸೇರಿಸುವ ಸಂಕಲ್ಪ ಹೊಂದಿದ್ದಾರೆ. ಈ 5ನೇ ಬೆಟ್ಟದಲ್ಲಿ ಶ್ರೀ ಕ್ಷೇತ್ರದಿಂದ ಧಾರ್ಮಿಕ ಬೆಳಕನ್ನು ವಿಶ್ವಕ್ಕೆ ಬೆಳಗಿಸಿದ ಮಹನೀಯರಾದ ಭದ್ರಬಾಹು ಮುನಿಗಳು, ಚಾವುಂಡರಾಯ, ಕಾಳಲಾದೇವಿ, ಗುಳ್ಳಕಾಯಿ ಅಜ್ಜಿ, ಗಂಗರಾಜ, ಶುಭಚಂದ್ರಾಚಾರ್ಯರು ಸೇರಿ ಮುಂತಾದವರ ಪ್ರತಿಮೆಗಳನ್ನು ಸ್ಥಾಪಿಸಿ ಅವರ ಕುರಿತಂತೆ ಶಿಲಾ ಶಾಸನಗಳನ್ನು ಅಳವಡಿಸುವ ಮೂಲಕ ಮತ್ತೊಂದು ಇತಿಹಾಸ ತಾಣವನ್ನಾಗಿಸುವ ದೂರದೃಷ್ಟಿ ಶ್ರೀಗಳದ್ದಾಗಿದೆ.

### ಶಾಂತಿಸಾಗರ ಮಹಾರಾಜರ ಹಿನ್ನಲೆ

ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರು 19ನೇ ಶತಮಾನದ ಆಷಾಢ ಕೃಷ್ಣ ಪಕ್ಷ ಬುಧವಾರ ಜುಲೈ 25, 1872ರಲ್ಲಿ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಟಿಭೋಜಟಿ ಗ್ರಾಮದ ಸಂಪ್ರದಾಯಸ್ಥ ಸ್ಯಾದ್ವಾದ ಸಂಸ್ಕೃತಿಯ ಆದರ್ಶ ಜೈನ ಕುಟುಂಬದ ಭೀಮಗೌಡ ಮತ್ತು ಸತ್ಯವತಿ ದಂಪತಿ ಸುಪುತ್ರರಾಗಿ ತಾಯಿಯ ತವರು ಯಳಗೋಡ ಗ್ರಾಮದಲ್ಲಿ ಸಾತಗೌಡ ಪಾಟೀಲರೆಂಬ ಶುಭನಾಮಧೇಯದಿಂದ ಜನ್ಮ ತಾಳಿದರು.

ಬಾಲ್ಯದಿಂದಲೇ ಅಂತರ್ಮುಖಿಯಾಗಿದ್ದ ಸಾತಗೌಡ ಪಾಟೀಲರು ಲೌಕಿಕ ಬದುಕನ್ನು ತಿರಸ್ಕರಿಸುತ್ತಲೇ ಆಧ್ಯಾತ್ಮಿಕ ಬದುಕನ್ನು ಅಪ್ಪಿ ಮುದ್ದಾಡುತ್ತಿದ್ದರು. ಮನದ ನೈರ್ಮಲ್ಯವನ್ನು ಸಾಧಿಸಲು ದೇಹದ ಮೇಲೆ ಮಲವನ್ನು ಧರಿಸಲು ಸಿದ್ಧರಾಗಿದ್ದರು. ಗೃಹಸ್ಥದಲ್ಲಿದ್ದರೂ ವೈರಾಗಿಯಾಗಿ, ವೈರಾಗ್ಯದಲ್ಲಿ ಅನುರಕ್ತರಾಗಿ ಅತೀವ ಆನಂದದ ಅನುಭವವನ್ನುಂಡು ವಿರಾಗದ ಮೇರುವಿನಂತೆ ಜಗತ್ತಿಗೆ ಕಂಡರು.

ಬಾಲ್ಯದಿಂದ ಬದುಕಿನುದ್ದಕ್ಕೂ ಟಿಬದುಕು ಬದುಕಲು ಬಿಡುಟಿ ಎಂಬ ತತ್ವದಡಿ ಜೀವನ ರೂಪಿಸಿಕೊಂಡು ಟಿಪ್ರಾಣಿ ದಯೆಯೇ ಧರ್ಮದ ಗುರಿಟಿ ಎಂದರಿತು ನಡೆದು ಎಲ್ಲಾ ಜೀವಿಗಳಲ್ಲೂ ಪ್ರೀತಿ, ಮಮತೆ, ಕರುಣೆ ತೋರಿ ಯಾರೊಂದಿಗೂ ಶತ್ರುತ್ವ ಭಾವ ತೋರದೇ ಎಲ್ಲರೊಂದಿಗೂ ಮಿತೃತ್ವದಿಂದ ಕೂಡಿ ನಡೆದು ಟಿದಯಾಸಿಂಧುಟಿ ಟಿಪ್ರೇಮಬಂಧುಟಿ ಎಂದೆನಿಸಿ ಸಂಯಮ ಪಥದಲ್ಲಿ ಸಾಗಿ ಆತ್ಮ ಜ್ಯೋತಿಯನ್ನು ಸಮುಜ್ವಲಗೊಳಿಸಿದ ಮಹಾನ್ ತ್ಯಾಗಿಯಾದವರು.

ಸಾತಗೌಡರು 22ನೇ ವಯೋಮಾನದಲ್ಲಿ ಮಹೀಷವಾಡಿ ಗ್ರಾಮದಲ್ಲಿ ವಿರಕ್ತಭಾವ ಹೊಂದಿ ಸಿದ್ದಸಾಗರರಿಂದ ಬ್ರಹ್ಮಚರ್ಯ ವ್ರತ ಸ್ವೀಕರಿಸಿ ಬಾಹ್ಯದ ಪ್ರತೀಕ್ಷೆಯನ್ನು ತ್ಯಜಿಸಿ ಮೋಕ್ಷ ಮಾರ್ಗದಲ್ಲಿ ನಡೆದರು. ದಿನ ಕಳೆದಂತೆ ಅಂತರ್ಮುಖಿಯಾಗಿ ವೈರಾಗ್ಯದ ಚರ್ಚೆಯಲ್ಲಿದ್ದೂ ಮುನಿಶ್ರೀ ಆದಿಸಾಗರ (ಭೋಸೆ) ರವರ ಸಾನಿಧ್ಯದಲ್ಲಿದ್ದು, ಆತ್ಮ ಕಲ್ಯಾಣದ ಹಾದಿ ಹಿಡಿದು ಆಹಾರ ಕ್ರಮ, ಶಯನ ಕ್ರಮ, ವಿಹಾರಗಳಲ್ಲಿ ತ್ಯಾಗಿಗಳ ಜೀವನ ಕ್ರಮ ಅಳವಡಿಸಿಕೊಂಡು ಪ್ರತಿಮಾಧಾರಿಗಳೆನಿಸಿದರು.



ಸಾತಗೌಡರು ದಿಗಂಬರ ದೀಕ್ಷೆ ಪಡೆಯುವ ಪೂರ್ವದಲ್ಲಿ ಕ್ರಿ.ಶ. 1912ರಲ್ಲಿ ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಆಗಮಿಸಿ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ದರ್ಶನ ಪಡೆದು ಅಂದಿನ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಜೊತೆ ಧರ್ಮ ಚರ್ಚೆಯನ್ನು ನಡೆಸಿ ವೈರಾಗ್ಯ ನೆಲೆಯನ್ನು ಉತ್ತಮ ಪಡಿಸಿಕೊಂಡು ಉತ್ತರ ಕರ್ನಾಟಕದೆಡೆಗೆ ವಿಹಾರ ಮಾಡಿದರು.

ಮುಂದೆ ದಿಗಂಬರ ಮುನಿಗಳು ವಿರಳವಾಗಿದ್ದ ಕಾಲದಲ್ಲಿ ತ್ಯಾಗಿ ಜೀವನದ ಅಸ್ತಂ ಹಿಡಿದೂ ಭವ ಸಾಮ್ರಾಜ್ಯವನ್ನು ಗೆಲ್ಲಲೂ ಸಿದ್ಧರಾಗಿ ಧರ್ಮ ರಕ್ಷಣೆಯತ್ತ ಮುನ್ನಡೆದು ಸಾಂಸಾರಿಕ ಬಂಧನಗಳನ್ನು ಕಾಲ ಕ್ರಮೇಣ ಕಳಚಿ, ಸಾತಗೌಡರು 42ನೇ ವಯಸ್ಸಿನಲ್ಲಿ ಕ್ರಿ.ಶ. 1915 ಜೂನ್ 25ರ ಜೇಷ್ಠ ಶುಕ್ಲ ತ್ರಯೋದಶಿಯಂದು ದೇವೇಂದ್ರ, ಕೀರ್ತಿ ಮುನಿಗಳಿಂದ ಟಿಉತ್ತೂರುಟಿ ಪಂಚ ಕಲ್ಯಾಣ ಸಂದರ್ಭದಲ್ಲಿ ಕ್ಷುಲ್ಲಕ ದೀಕ್ಷೆ ಪಡೆದು ಕ್ಷುಲ್ಲಕ ಶ್ರೀ ಶಾಂತಿಸಾಗರರು ಎನಿಸಿದರು.

ಶಾಂತಿಸಾಗರರು ಮುಂದೆ ಮೂರು ವರ್ಷಗಳ ಅವರ್ಣನೀಯ ಎಡರು-ತೊಡರುಗಳನ್ನು ಎದುರಿಸುತ್ತಾ ಆಗಮೋಕ್ತ ಮಾರ್ಗದಲ್ಲಿ ನಡೆದು ತಮ್ಮ ಧ್ಯಾನ-ಅಧ್ಯಯನಗಳ ಮೂಲಕ ಚಾರಿತ್ರವನ್ನು ಬಲಪಡಿಸಿಕೊಳ್ಳುತ್ತಾ ಆತ್ಮಶಕ್ತಿಯನ್ನು ವೃದ್ಧಿಗೊಳಿಸಿ ಜ್ವಾಲಾಮುಖಿಯಂತೆ ಸಿಡಿಯದೇ ಶಾಂತಿಯ ಸಾಗರವೇ ಆಗಿ ಸಮ್ಯಕ್ ತತ್ವರೂಪಿ ಅಮೃತಕಳಶವನ್ನು ಎತ್ತಿ ಹಿಡಿದರು.

ಶಾಂತಿ ಸಾಗರರು ಗಿರಿನಾರ್ ಯಾತ್ರೆ ಕೈಗೊಂಡು 1920ರ ಮಾ. 2ರಂದು ಸ್ವತ ಮುನಿ ದೀಕ್ಷೆ ಪಡೆದು ಜೈನ ಸಮಾಜಕ್ಕೆ ಮುನಿಚರ್ಯೆಯ ದರ್ಶನ ಮಾಡಿಸಿದರು. 1924ರ ಆ. 4ರಂದು ಆಚಾರ್ಯ ಪಟ್ಟಕೇರಿದರು. 1925ರಲ್ಲಿ ಶ್ರವಣಬೆಳಗೊಳದಲ್ಲಿ ನಡೆದ ಭಗವಾನ್ ಶ್ರೀ ಗೊಮ್ಮಟೇಶ್ವರ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಮಹೋತ್ಸವದ ಸಾನಿಧ್ಯ ವಹಿಸಿ ಮಹೋತ್ಸವದ ಯಶಸ್ವಿಗೆ ಕಾರಣೀಭೂತರಾದರು.

ಅವರು ಶ್ರವಣಬೆಳಗೊಳಕ್ಕೆ ಬಂದು ಇಂದಿಗೆ 100 ವರ್ಷಗಳು ಕಳೆದಿರುವ ಹಿನ್ನಲೆಯಲ್ಲಿ ಹಾಗು ಅವರಿಂದ ಜೈನ ಧರ್ಮದ ಮುನಿ ಪರಂಪರೆ ಗಟ್ಟಿಯಾಗಿದ್ದು ಇಂದಿಗೂ ಅವರನ್ನು ಸ್ಮರಿಸುವಂತೆ ಮಾಡಿದೆ. ಅವರ ಹೆಸರನ್ನು ಇತಿಹಾಸದಲ್ಲಿ ಚಿರಸ್ಥಾಯಿಯಗಿಸುವ ಉದ್ದೇಶದಿಂದ ಅವರ ಪ್ರತಿಮೆ ಸ್ಥಾಪನೆ ಮಾಡಿ ಕ್ಷೇತ್ರದಲ್ಲಿ ಅವರ ಹೆಸರಿನಲ್ಲಿ ನಾಲ್ಕನೇ ಬೆಟ್ಟದ ಅನಾವರಣ ಮಾಡಲಾಗುತ್ತಿದೆ.

# ಚಂಗಡಹಳ್ಳಿ ಗ್ರಾಮಸಭೆಗೆ ಬಹುತೇಕ ಅಧಿಕಾರಿಗಳ ಗೈರು: ಬಹಿಷ್ಕಾರ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೆತ್ತೂರು: ಗ್ರಾಮ ಸಭೆಗೆ ಕೇವಲ ಮೂರು ಇಲಾಖೆಯ ಅಧಿಕಾರಿಗಳು ಮಾತ್ರ ಹಾಜರಾಗಿ ಗ್ರಾಮಸ್ಥರ ಸಮಸ್ಯೆಯನ್ನು ಕೇಳಲು ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು ಗ್ರಾಮಸಭೆಯನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ ಘಟನೆ ಚಂಗಡಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ.

ಚಂಗಡಹಳ್ಳಿ ಗ್ರಾಮ ಪಂಚಾಯಿತಿಯ ಗ್ರಾಮಸಭೆಯನ್ನು ಗ್ರಾ.ಪಂ. ಅಧ್ಯಕ್ಷ ಜಗನ್ನಾಥ್ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಭೆಗೆ ತಾಲ್ಲೂಕಿನ ಆಡಳಿತದ 37 ಇಲಾಖೆಗೆ ಮಾಹಿತಿ ಕೊಡಲಾಗಿತ್ತು. ಕೇವಲ ಮೂರು ಇಲಾಖೆಯವರು ಮಾತ್ರ ಹಾಜರಿದ್ದರು. ಅದನ್ನು ಕಂಡ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಾ ಗ್ರಾಮಸಭೆಯನ್ನು ಬಹಿಷ್ಕರಿಸಿ ಹಾಜರಾಗದ ಅಧಿಕಾರಿಗಳಿಗೆ ಧಿಕ್ಕಾರ ಕೂಗಿದರು.

ಗ್ರಾಮ ಪಂಚಾಯಿತಿಯ ಗ್ರಾಮಸಭೆ ಆರಂಭವಾಗುತ್ತಿದ್ದಂತೆ ಕಾಮನಹಳ್ಳಿ ಗ್ರಾಮದ ಸದಸ್ಯರಾದ ಪ್ರೀತಮ್ ಸಭೆಗೆ ಬಹುತೇಕ ಅಧಿಕಾರಿಗಳು ಹಾಜರಾಗಿಲ್ಲ. ಗ್ರಾಮಸ್ಥರ ಸಮಸ್ಯೆಯನ್ನು ಯಾರಿಗೆ ಹೇಳುವುದು ಯಾರಿಂದ ಮಾಹಿತಿಯನ್ನು ಪಡೆದುಕೊಳ್ಳುವುದು ಎಂದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಬಿಜೆಪಿ ಮುಖಂಡರಾದ ಸವಿನ್ ಗೌಡ ಈಗಾಗಲೇ ಗ್ರಾಮ ಪಂಚಾಯಿತಿಯಲ್ಲಿ ಕೆಲವು ಹಗರಣಗಳು ಆಗಿವೆ ಎಂದು ಜನರು ಮಾತನಾಡುತ್ತಿದ್ದಾರೆ. ಅದರ ಬಗ್ಗೆ ಸೂಕ್ತ ತನಿಖೆ ನಡೆಯಬೇಕು. ಹೆಚ್ಚಿನ ಸಂಖ್ಯೆಯ ಇಲಾಖೆಯವರು ಸಭೆಗೆ ಹಾಜರಾಗಬೇಕು ಅವರಿಂದ ರೈತರಿಗೆ ಇಲಾಖೆಯಿಂದ ಸಿಗುವ ಸವಲತ್ತುಗಳ ಬಗ್ಗೆ ಸೂಕ್ತವಾದ ಮಾಹಿತಿ ಸಿಗಬೇಕು. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು ಬರಬೇಕು ಇಲ್ಲವಾದರೆ ಗ್ರಾಮ ಸಭೆಯನ್ನು ನಡೆಸಲು ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಸ್ಕಾಲರ್ಸ್ ಶಾಲೆಯಲ್ಲಿ ಕನಕದಾಸ ಜಯಂತಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಸ್ಕಾಲರ್ಸ್ ಶಾಲೆಯಲ್ಲಿ ಶನಿವಾರ ದಾಸ ಶ್ರೇಷ್ಠ ಕನಕದಾಸರ 538ನೇ ಜಯಂತಿ ಆಚರಿಸಲಾಯಿತು.

ಶಾಲೆಯ ಆಡಳಿತಾಧಿಕಾರಿ ಡಾ. ಎಚ್.ಎನ್. ಚಂದ್ರಶೇಖರ್ ಮಾತನಾಡಿ, ಕನಕದಾಸರ ಜೀವನ ಬೋಧನೆ, ಕೀರ್ತನೆಗಳು ಇಂದಿಗೂ ಲಕ್ಷಾಂತರ ಜನರಿಗೆ ಮಾರ್ಗದರ್ಶನ ಹಾಗೂ ಸ್ಫೂರ್ತಿಯಾಗಿದೆ. ದಾಸ ಶ್ರೇಷ್ಠರೆಂದೇ ಕರೆಯಲಾಗುವ ಕನಕದಾಸರು ಮಹಾನ್ ಹರಿದಾಸ ಹಾಗೂ ಕೀರ್ತನಕಾರ. ಕರ್ನಾಟಕದಲ್ಲಿ ಭಕ್ತಿ ಚಳವಳಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದರು.

ಮಕ್ಕಳು ಹಾಗೂ ಶಿಕ್ಷಕರು ಕನಕದಾಸರ ಕೀರ್ತನೆಗಳನ್ನು ಹಾಡುವುದರ ಮೂಲಕ ಅವರಿಗೆ ಗೀತ ನಮನವನ್ನು ಸಲ್ಲಿಸಿದರು. ಅಜ್ಞಾನಿಗಳೊಡನೆ ಅಧಿಕ ಸ್ನೇಹಕ್ಕಿಂತ ವಿಜ್ಞಾನಿಗಳೊಡನೆ ಜಗಳವಾಡುವುದು ಲೇಸೆಂದು ಕನಕದಾಸರು ತಮ್ಮ ಕೀರ್ತನೆಗಳಲ್ಲಿ ತಿಳಿಸಿದ್ದಾರೆ. ಅಂತೆಯೇ ಮಕ್ಕಳು ಸಜ್ಜನರ ಸಂಗವನ್ನು ಮಾಡಬೇಕೆಂದು ತಿಳಿಸಿದರು.

ಶಾಲೆಯ ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಹಾಗೂ ಇತರರಿದ್ದರು.

# ಸಕಲೇಶಪುರದಲ್ಲಿ 538ನೇ ಕನಕ ದಾಸರ ಜಯಂತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪರದೇಶಗಳಲ್ಲಿ ಇತಿಹಾಸವೆಂದರೆ ಕಟ್ಟಡಗಳು ಮಾತ್ರ, ಆದರೆ ಭಾರತದಲ್ಲಿ ನೈಜ ಘಟನೆಗಳೇ ಇತಿಹಾಸವಾಗಿ ಹೇಳಲ್ಪಡುವ ಸಂಪ್ರದಾಯವಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಆವರಣದಲ್ಲಿ ನಡೆದ 538ನೇ ಕನಕ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಹಿರಿಯರು ತ್ಯಾಗಮಯ ಜೀವನದಿಂದ ಸಮಾಜಕ್ಕೆ ಮಾರ್ಗದರ್ಶನ ನೀಡಿದರು. ಇಂತಹ ಪುರುಷೋತ್ತಮರನ್ನು ನೆನಪಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸಾಮಾನ್ಯ ನಾಗರಿಕರೆಲ್ಲರೂ ಇಂತಹ ಭಕ್ತಿ ಪರಂಪರೆಯ ಆಚರಣೆಯಲ್ಲಿ ಪಾಲ್ಗೊಂಡರೆ ಅದು ಸಮಾಜದಲ್ಲಿ ಏಕತೆಯ ಭಾವನೆಯನ್ನು ಬಲಪಡಿಸುತ್ತದೆ ಎಂದು ಹೇಳಿದರು.

ಕನಕದಾಸರು ಹಾಗೂ ಇವರಿಗೆ ಸಮಾನರಾದ ಮಹನೀಯರು ಮಾನವೀಯತೆ, ಸಮಾನತೆ ಮತ್ತು




ನಂಬಿಕೆಯ ನೈಜ ಉದಾಹರಣೆ. ಅವರ ಜೀವನವು ನಮ್ಮೆಲ್ಲರಿಗೂ ಪ್ರೇರಣೆ. ಬೇರೆ ದೇಶಗಳಲ್ಲಿ ಇತಿಹಾಸವೆಂದರೆ ಕಲ್ಲಿನ ಕಟ್ಟಡಗಳು, ಕೋಟೆಗಳು; ಆದರೆ ನಮ್ಮ ದೇಶದಲ್ಲಿ ಇತಿಹಾಸವೆಂದರೆ ಭಕ್ತರ ತ್ಯಾಗ, ಅವರ ಜೀವನ ಪಾಠಗಳು ಮತ್ತು ನೈಜ ಘಟನೆಗಳು. ಈ ನೈಜ ಇತಿಹಾಸವೇ ಭಾರತದ ಶಕ್ತಿ ಎಂದು ಅವರು ಅಭಿಪ್ರಾಯಪಟ್ಟರು.

ತಾಲೂಕು ಕಾರ್ಯನಿರ್ವಹಣಾಧಿಕಾರಿ ಗಂಗಾಧರ ಮಾತನಾಡಿ, ಕನಕದಾಸರು ಕೇವಲ ಭಕ್ತರಾಗಿಯೇ ಅಲ್ಲ, ಸಾಮಾಜಿಕ ಸುಧಾರಕರಾಗಿಯೂ ಪ್ರಸಿದ್ಧರಾಗಿದ್ದಾರೆ.

ಅವರು ವರ್ಣಭೇದ, ಜಾತಿಭೇದದ ವಿರುದ್ಧ ನಿಂತು ಮಾನವ ಕುಲವೇ ಒಂದು ಎಂಬ ಸಂದೇಶ ನೀಡಿದ್ದಾರೆ. ಪ್ರಸ್ತುತ ಕಾಲಘಟ್ಟದಲ್ಲೂ ಸಹ ದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ದಿನನಿತ್ಯ ಹಲವು ರೀತಿಯಲ್ಲಿ ದೌರ್ಜನ್ಯಗಳು ನಡೆಯುತ್ತಿವೆ.

ನಮ್ಮ ತಾಲೂಕಿನ ಬೆಳಗೋಡು ಹೋಬಳಿಯ ಭಾಗ್ಯ ಗ್ರಾಮದಲ್ಲಿ ಅಲ್ಪಸಂಖ್ಯಾತರಿಗೆ ಸೇರಿದ ಸ್ಮಶಾನದಲ್ಲಿ ಸವ ಸಂಸ್ಕಾರಕ್ಕೆ ಮುಂದಾದಾಗ, ಸಮೀಪದ ನಿವಾಸಿಗಳು ನಮ್ಮ ಮನೆಯ ಮುಂದೆ ನೀವು ಸಂಸ್ಕಾರ ಮಾಡುವುದು ಸರಿಯಲ್ಲ ಎಂದು ಹೇಳಿ ವಿರೋಧ ವ್ಯಕ್ತಪಡಿಸಿರುವ ಘಟನೆ ಸೇರಿದಂತೆ ದೇಶದ ಯುಪಿ ಹಾಗೂ ರಾಜ್ಯದ ಇತರ ಭಾಗಗಳಲ್ಲಿಯೂ ಇಂತಹ ತಾರತಮ್ಯಗಳು ಮುಂದುವರಿದಿವೆ. ಕನಕದಾಸರ ಕಾಲದಲ್ಲಿ ಈ ಅನ್ಯಾಯಗಳು ಉತ್ತುಂಗದಲ್ಲಿದ್ದವು ಇವುಗಳನ್ನ ಇವುಗಳ ವಿರುದ್ಧ ಹೋರಾಟ ನಡೆಸಿ ಭಕ್ತ ಕನಕದಾಸರಾದಾರು ಎಂದು ಹೇಳಿದರು. ಇಂದಿನ ಪೀಳಿಗೆ ಕನಕದಾಸರ ಜೀವನ ಮೌಲ್ಯಗಳನ್ನು ಅರಿತು, ಅವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಿಕ್ಷಣದ ಮೂಲಕ ಭಕ್ತಿ ಮತ್ತು ಮಾನವೀಯತೆ ಬೆಳೆಸುವುದು ಕಾಲದ ಅವಶ್ಯಕತೆ ಎಂದು ಹೇಳಿದರು.

ಕುರುಬ ಸಮಾಜದ ತಾಲೂಕು ಅಧ್ಯಕ್ಷ ಸೋಮೇಗೌಡ ಮಾತನಾಡಿ, ಕನಕದಾಸರು ದೇವರ ಭಕ್ತರಾಗಿದ್ದಷ್ಟೇ ಅಲ್ಲ, ಅಸಹಿಷ್ಣುತೆಯ ವಿರುದ್ಧ ಹೋರಾಡಿದ ಧೈರ್ಯಶಾಲಿ ತತ್ತ್ವಜ್ಞಾನಿ. ಅವರು ತೋರಿಸಿದ ಮಾರ್ಗವೇ ಸಮಾನತೆ ಮತ್ತು ಸೌಹಾರ್ದತೆಯ ದಾರಿ. ನಮ್ಮಲ್ಲಿ ಎಲ್ಲರಿಗೂ ಅವರ ಬೋಧನೆ ಅಗತ್ಯ. ಅವರು ಸಮಾಜದ ಅಡಿಪಾಯವನ್ನು ಬಲಪಡಿಸಿದ ನಿಜವಾದ ಕ್ರಾಂತಿಕಾರರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ರಾಮೇಗೌಡ, ಪ್ರಾಂಶುಪಾಲ ಸತೇಂದ್ರ, ಕಾಂಗ್ರೆಸ್ ಮುಖಂಡ ವೈ.ಪಿ. ರಾಜೇಗೌಡ, ರಾಜಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯ ಶ್ಲಾಘನೀಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಬಡತನದಲ್ಲಿದ್ದವರಿಗೆ ಹಲವು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿರುವುದು ಶ್ಲಾಘನೀಯ ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ತಾಹೆರಾ ಬೇಗಂ ತಿಳಿಸಿದರು.

ಧರ್ಮಸ್ಥಳ ಬಿ.ಸಿ.ಟ್ರಸ್ಟ್ ವತಿಯಿಂದ ಪಟ್ಟಣದ ದೊಡ್ಡಿ ಬೀದಿ ನಿವಾಸಿ ಮುನಿರಾ ಬೇಗಂ ಅವರಿಗೆ ನಿರ್ಮಿಸಲಾದ ಟಿವಾತ್ಸಲ್ಯಟಿ ಮನೆಯನ್ನು ಹಸ್ತಾಂತರಗೊಳಿಸಿ ಮಾತನಾಡಿ, ಜ್ಞಾನ ವಿಕಾಸ ಕಾರ್ಯಕ್ರಮದಡಿ ಸಮಾಜದಲ್ಲಿರುವ ದುರ್ಬಲ ಮತ್ತು ಅಸಹಾಯಕ ಸ್ಥಿತಿಯಲ್ಲಿರುವ ಕುಟುಂಬಗಳನ್ನು ಗುರುತಿಸಿ ಅವರ ಜೀವನ ನಿರ್ವಹಣೆಗೆ ಬೇಕಾದ ಮಾಸಾಶನ ಹಾಗೂ ಅಗತ್ಯಕ್ಕೆ ಅನುಕೂಲವಾಗುವಂತೆ ವಾತ್ಸಲ್ಯ ಕಿಟ್‌ಗಳನ್ನು ಕೊಡುತ್ತಿರುವುದು. ಸೂರು ಇಲ್ಲದವರಿಗೆ ಸ್ವಂತ ಸೂರು ನಿರ್ಮಾಣ ಮಾಡಿ ಕೊಡುತ್ತಿರುವುದು ಶ್ಲಾಘನೀಯ ಎಂದರು.

ತಾಲ್ಲೂಕು ಕ್ಷೇತ್ರ ಯೋಜನಾಧಿಕಾರಿ ಕೆ. ರತ್ನಾಕರ್ ಕೊಟ್ಟಾರಿ ಮಾತನಾಡಿ, ಆಲೂರು ಯೋಜನಾ ಕಚೇರಿ ವ್ಯಾಪ್ತಿಯಲ್ಲಿ 3ನೇ ವಾತ್ಸಲ್ಯ ಮನೆಯನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ ಎಂದರು.

# ಇತಿಹಾಸದಲ್ಲಿ ಈ ದಿನ

## ನವೆಂಬರ್-09

1918: ಪ್ರಥಮ ವಿಶ್ವಯುದ್ಧದಲ್ಲಿ ಜರ್ಮನಿ ಸೋಲನುಭವಿಸಿ ಕೈಸರ್ ವಿಲ್ಹೆಲ್ಮ್ ಗದ್ದುಗೆ ತ್ಯಜಿಸಿದರು.

1938: ಜರ್ಮನಿಯಲ್ಲಿ ನಡೆದ ಕ್ರಿಸ್ಟಲ್ ನೈಟ್ ಯಹೂದಿ ಜನರ ವಿರುದ್ಧದ ದೌರ್ಜನ್ಯ, ನಾಜಿ ಸರ್ಕಾರದ ಕ್ರೂರ ಕೃತ್ಯಕ್ಕೆ ಚಾಲನೆ ನೀಡಿದ ದಿನ.

1967: ನಾಸಾ ಸಂಸ್ಥೆಯ ಸ್ಯಾಟರ್ನ್ 5 ರಾಕೆಟ್ ಯಶಸ್ವಿ ಪ್ರಯೋಗ ನಂತರದ ಅಪೊಲೋ ಮಿಷನ್‌ಗಳಿಗೆ ದಾರಿ ತೆರೆಯಿತು.

1989: ಬರ್ಲಿನ್ ಗೋಡೆ ಧ್ವಂಸಗೊಂಡು ಪೂರ್ವ ಮತ್ತು ಪಶ್ಚಿಮ ಜರ್ಮನಿಯ ಪುನರ್ ಐಕ್ಯತೆಗೆ ಚಾಲನೆ ನೀಡಿದ ಇತಿಹಾಸಿಕ ದಿನ.

### ಜನನ

1877: ಭಾರತದ ಕ್ರಾಂತಿಕಾರಿ, ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತ್ ರೈ

1906: ಜರ್ಮನಿಯ ಸೇನಾನಿ ಮತ್ತು ಹಿಟ್ಲರ್ ವಿರುದ್ಧದ ಸಂಚು ರೂಪಿಸಿದ ಕ್ಲಾಸ್ ವಾನ್ ಸ್ಟಾಫ್‌ಬರ್ಗ್

1934: ಪ್ರಸಿದ್ಧ ಬ್ರಿಟಿಷ್ ಲೇಖಕಿ ಕಾರ್ಲ್ ಸೇಜನ್

1951 ಭಾರತೀಯ ಚಲನಚಿತ್ರ ನಟ ರವಿ ಕಿಶನ್

1906: ಜರ್ಮನಿಯ ಪ್ರಸಿದ್ಧ ಪತ್ರಕರ್ತ ಮತ್ತು ರಾಜಕಾರಣಿ ಕ್ಲಾಸ್ ಫಾನ್ ಶ್ಟಾಫ್‌ಬರ್ಗ್

### ಮರಣ

2005: ಪ್ರಖ್ಯಾತ ಭಾರತೀಯ ಗಾಯಕಿ ನೂರ ಜಹಾನ್

1989: ಪ್ರಸಿದ್ಧ ಕನ್ನಡ ಸಾಹಿತ್ಯವಿಮರ್ಶಕ ಹಾಗೂ ಪ್ರಾಧ್ಯಾಪಕ ಡಾ. ವಿ.ಕೆ. ಗೋಕಾಕ್

2005: ಪಾಕಿಸ್ತಾನದ ಪ್ರಸಿದ್ಧ ಗಾಯಕಿ ನೂರ ಜಹಾನ್

2014 ಭಾರತದ ಮಾಜಿ ರಕ್ಷಣಾ ಸಚಿವ ಹಾಗೂ ರಾಜಕಾರಣಿ ಎಂ.ಎಂ. ಜೇಕಬ್

# ನೂತನ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಉದ್ಘಾಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ : ತಾಲ್ಲೂಕಿನ ಹೆತ್ತೂರು ಹೋಬಳಿಯ ವಣಗೂರು ಕೂಡುರಸ್ತೆ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮಂಡ್ಯ ಜಿಲ್ಲೆಯ ಆರ್.ಐ.ಡಿ.ಎಫ್-25 ಯೋಜನೆಯಡಿ ನಿರ್ಮಿಸಿದ ಪಶುಚಿಕಿತ್ಸಾ ಕೇಂದ್ರದ ನೂತನ ಕಟ್ಟಡವನ್ನು ಶಾಸಕ ಸಿಮೆಂಟ್ ಮಂಜು ಶುಕ್ರವಾರ ಉದ್ಘಾಟಿಸಿದರು.

ಕಳೆದ ಎರಡು ವರ್ಷಗಳಿಂದ ಉದ್ಘಾಟನಾ ಭಾಗ್ಯ ಕಾಣದ ನೂತನ ಕಟ್ಟಡ ಪಾಳು ಬಿದ್ದಂತಾಗಿತ್ತು. ಇದನ್ನು ಮನಗಂಡ ಶಾಸಕರು ಕಟ್ಟಡ ಮೇಲ್ಚಾವಣಿಯನ್ನು ನನ್ನ ಅನುದಾನದಲ್ಲಿ ನಿರ್ಮಾಣ ಭರವಸೆ ನೀಡಿ. ಪೂರ್ಣವಾಗಿ ನಿರ್ಮಾಣಗೊಂಡಿರುವ ಕಟ್ಟಡ ಬಳಕೆಯಾಗದಿದ್ದರೆ ಶಿಥಿಲ ವ್ಯವಸ್ಥೆಗೆ ತಲುಪುತ್ತದೆ ಆದ್ದರಿಂದ ಪಶುಪಾಲಕರ ಬಳಕೆಯ ಹಿತದೃಷ್ಟಿಯಿಂದ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ವಣಗೂರು ಕೂಡುರಸ್ತೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಮತ್ತು ಪಶುಪಾಲಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಜಾನುವಾರುಗಳ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಮನವಿ



ಮಾಡಿದರು. ರಾಜ್ಯದಲ್ಲಿ ಈಗ ಹೈನುಗಾರಿಕೆ ಲಾಭದಾಯಕ ಉದ್ಯಮವಾಗಿದೆ. ತಾಲೂಕು ಹಾಲು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದು, ಪಶುಗಳ ಆರೋಗ್ಯ ಹಾಗೂ ಉತ್ತಮ ಗುಣಮಟ್ಟದ ಹಾಲು ಉತ್ಪಾದಿಸುವ ನಿಟ್ಟಿನಲ್ಲಿ ಪಶು ಆಸ್ಪತ್ರೆಗಳು ಮುಖ್ಯ ಪಾತ್ರ ವಹಿಸುತ್ತವೆ. ಪಶು ವೈದ್ಯರ ಪಾತ್ರ ಹೆಚ್ಚಿದೆ ಈ ನಿಟ್ಟಿನಲ್ಲಿ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗಳು ಪಶುಪಾಲಕರೊಂದಿಗೆ ಸಂಯಮದಿಂದ ವರ್ತಿಸಿ ಇಲಾಖೆಯಿಂದ ದೊರಕುವ ಸೌಲಭ್ಯಗಳ ಕುರಿತು ಮಾಹಿತಿ ನೀಡಬೇಕು ಎಂದು ಸೂಚಿಸಿದರು.

# ಗಾಂಜಾ ಮಾರಾಟ: ಅಸ್ಸಾಂ ಕಾರ್ಮಿಕರ ಬಂಧನ



ಸಕಲೇಶಪುರ: ಪಟ್ಟಣದ ಎಪಿಎಂಸಿ ಬಳಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಅಸ್ಸಾಂ ಮೂಲದ ಇಬ್ಬರು ಕೂಲಿ ಕಾರ್ಮಿಕರನ್ನು ನಗರ ಠಾಣೆ ಪೊಲೀಸರು ಬಂಧಿಸಿ, 500 ಗ್ರಾಂ ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡಿದ್ದಾರೆ. ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಹೋಬಳಿ ಬೆಟ್ಟದಮನೆಯ ಎಸ್ಟೇಟ್‌ವೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಅಮ್ಜದ್ ಅಲಿ, ಇದ್ರೀಸ್ ಅಲಿ ಬಂಧಿತ ಆರೋಪಿಗಳು. ಅಸ್ಸಾಂ ಮೂಲದ ಕಾರ್ಮಿಕರನ್ನು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ದೂರು ಬಂದ ಹಿನ್ನೆಲೆ, ಡಿವೈಎಸ್ಪಿ ಎಸ್.ಕೆ.ಮಾಲತೇಶ್ ಮಾರ್ಗದರ್ಶನದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ವಿ.ಸಿ.ವನರಾಜು, ಸಬ್ ಇನ್ಸ್‌ಪೆಕ್ಟರ್ ಮಹೇಶ್, ಸಿಬ್ಬಂದಿ ಪೃಥ್ವಿ, ರೇವಣ್ಣ, ಶ್ರೀಧರ್, ಸೋಮಶೇಖರ್, ಚಂದ್ರಕಾಂತ್, ಮಧು ಅವರಿದ್ದ ತಂಡ, ದಾಳಿ ನಡೆಸಿ, ಪಟ್ಟಣದ ಎಪಿಎಂಸಿ ಬಳಿ ಆರೋಪಿಗಳನ್ನು ಗಾಂಜಾ ಸಮೇತ ವಶಕ್ಕೆ ಪಡೆದ್ದಾರೆ.

# ಕುಸಿದ ಕೋಟೆ ಬುರ್ಜು ತಪ್ಪಿದ ಭಾರೀ ಅನಾಹುತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬಾಣಾವರ: ಬಾಣಾವರ ಐತಿಹಾಸಿಕ ಕೋಟೆಯ ಬುರ್ಜು ಕಳೆದ ಕೆಲ ದಿನಗಳ ಹಿಂದೆ ಸುರಿದ ಧಾರಾಕಾರ ಮಳೆಯಿಂದಾಗಿ ಗುರುವಾರ ತಡರಾತ್ರಿ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಅಲ್ಲಿರುವ ಮನೆಗಳಿಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ.

ಈ ಸ್ಥಳ ಪ್ರತಿನಿತ್ಯ ಸಾರ್ವಜನಿಕರು ಓಡಾಡುವಂತಹ ಪ್ರದೇಶವಾಗಿದ್ದು, ಕಳೆದ ವಾರವಷ್ಟೇ ಸ್ವಲ್ಪ ಭಾಗದ ಬುರ್ಜು ಕುಸಿದು ಬಿದ್ದಿತ್ತು. ಗುರುವಾರ ತಡರಾತ್ರಿ ದೊಡ್ಡ ಭಾಗದ ಬುರ್ಜು ಕುಸಿದು ಬಿದ್ದು, ರಸ್ತೆಯ ಮೇಲೆ ದೊಡ್ಡ ದೊಡ್ಡ ಬಂಡೆ ಕಲ್ಲುಗಳು ಹಾಗು ಮಣ್ಣಿನ ರಾಶಿ ಬಿದ್ದಿರುವುದರಿಂದ ಇಲ್ಲಿ ವಾಹನಗಳು ಮಾತ್ರವಲ್ಲದೆ ಸಾರ್ವಜನಿಕರು ಓಡಾಟ ಸ್ಥಗಿತಗೊಂಡಿದೆ.

ಬಾಣಾವರದ ಐತಿಹಾಸಿಕ ಕೋಟೆ ಮತ್ತು ಬುರ್ಜುಗಳನ್ನು ರಕ್ಷಿಸಿ, ಇತಿಹಾಸದ ಪಳಯುಳಿಕೆಗಳನ್ನು ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕೆಂದು ಪ್ರಾಚೀನ ಸ್ಮಾರಕ ಸಂರಕ್ಷಣಾ ಟ್ರಸ್ಟ್‌ನ ವತಿಯಿಂದ ಹಲವು ಬಾರಿ ಸಂಬಂಧಿತ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಆದರೆ, ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ. ಪುರಾತತ್ವ ಇಲಾಖೆಯ ಆಯುಕ್ತರನ್ನು ಭೇಟಿ ಮಾಡಿ, ಕೋಟೆ ಮತ್ತು ಬುರ್ಜುಗಳನ್ನು ಸ್ಮಾರಕ ಸಂರಕ್ಷಣಾ ಪಟ್ಟಿಗೆ ಸೇರಿಸುವಂತೆ ಮನವಿ ಮಾಡಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಕೋಟೆ ಕುಸಿತವಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇವಲ ನೆಪಕ್ಕೆ ಒಂದೆರಡು ಬಾರಿ ಭೇಟಿ ನೀಡಿದ ಅಧಿಕಾರಿಗಳು ಇದುವರೆಗೂ ಸ್ಮಾರಕವನ್ನು ಸಂರಕ್ಷಣಾ ಪಟ್ಟಿಗೆ ಸೇರಿಸದೆ, ಸಬೂಬು ಹೇಳಿಕೊಂಡು ಕಾಲ ಹರಣ ಮಾಡುತ್ತಿದ್ದಾರೆ. ಈಗ ಬಿದ್ದಿರುವ ಬುರ್ಜು ಈ ಹಿಂದೆ ಬಿದ್ದಾಗ ಅಲ್ಲಿನ ಮನೆ ಹಾನಿ ಆದಂತಹ ಸಂದರ್ಭದಲ್ಲಿ ಐದು ಜನ ಸಂತ್ರಸ್ತರಿಗೆ ಸರ್ವೇ ನಂ.1 ರಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಲು ನಿವೇಶನಗಳನ್ನು ನೀಡಲಾಗಿತ್ತು. ಆದರೆ, ಆ ಸ್ಥಳದಲ್ಲಿ 20 ವರ್ಷಗಳು ಕಳೆದರೂ ಸಹ ಯಾರೊಬ್ಬರು ಮನೆಗಳನ್ನು ನಿರ್ಮಿಸದೆ, ಕೆಲವರು ಆ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ.



## ಕ್ರಮ ಕೈಗೊಳ್ಳಲು ಆಗ್ರಹ

ಇನ್ನಾದರೂ ಸಂಬಂಧಿತ ಇಲಾಖೆಯ ಅಧಿಕಾರಿಗಳು ಮತ್ತು ಸಚಿವರು ಕೋಟೆ ಮತ್ತು ಬುರ್ಜುಗಳನ್ನು ರಕ್ಷಿಸಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಇತಿಹಾಸ ಸಾರುವ ಇಂತಹ ಪಳವಳಿಕೆಗಳನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಹಾಗು ಅಧಿಕಾರಿಗಳ ಕರ್ತವ್ಯವಾಗಿದೆ. ಅಧಿಕಾರಿಗಳು ತಕ್ಷಣ ಭೇಟಿ ನೀಡಿ ಈ ಬುರ್ಜುಗಳನ್ನು ಉಳಿಸುವ ಕಡೆ ಗಮನ ಹರಿಸಬೇಕು. ಪುರಾತನ ಐತಿಹಾಸಿಕ ಸ್ಮಾರಕವನ್ನು ರಕ್ಷಿಸದೆ ಹೋದರೆ, ನಮ್ಮ ಮುಂದಿನ ಪೀಳಿಗೆಗೆ ಕರ್ನಾಟಕದ ಇತಿಹಾಸವನ್ನು ತಿಳಿಸುವುದು ಕಷ್ಟವಾಗುತ್ತದೆ ಎಂದು ಪ್ರಾಚೀನ ಸ್ಮಾರಕ ಸಂರಕ್ಷಣಾ ಟ್ರಸ್ಟ್‌ನ ಗೌರವಾಧ್ಯಕ್ಷ ಬಿ. ರವಿಶಂಕರ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248